ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ ಸಚಿವರು):— ಮಾನ್ಯ ಅಧ್ಯಕ್ಷರೇ,

೧೯೫೭ರ ಜೂನ್ ೭ ರಂದು ಜನಿಸಿದ ಕಾಳಿಂಗ ನಾವಡರು ಕಳೆದ ೧೫ ವರ್ಷಗಳಿಂದಲೂ ಭಾಗವತರಾಗಿ ಕೆಲಸ ಮಾಡುತ್ತಿದ್ದರು. ಸಾಲಿಗ್ರಾಮ ಮೇಳ, ಪೆರ್ಡೂರು ಮೇಳ, ಅಮೃತೇಶ್ವರಿ ಮೇಳ, ಮೊದಲಾದವುಗಳಲ್ಲಿ ಭಾಗವತರಾಗಿ ಪ್ರಸಿದ್ಧಿಯನ್ನು ಪಡೆದ ಶ್ರೀಯುತರು, ಭಾಗವತಿಕೆಯಲ್ಲಿ ಪೂರ್ಣಾನುಭವವನ್ನು ಪಡೆದ ಹಾಡುಗಾರರು.

ದಿವಂಗತ ನಾವಡ ಅವರು ಕೇವಲ ಭಾಗವತರರಾಗಿ ಸಾಧನೆ ಮಾಡಿದ್ದಷ್ಟೇ ಅಲ್ಲದೆ, ಅನೇಕ ಯಕ್ಷಗಾನ ಪ್ರಸಂಗಗಳನ್ನು ರಚಿಸಿದ್ದಾರೆ. ರೂಪಶ್ರೀ, ಭಾಗ್ಯಶ್ರೀ, ವಿಜಯಶ್ರೀ, ನಾಗಶ್ರೀ, ಕಾಂಚನಶ್ರೀ ಮೊದಲಾದ ಪ್ರಸಂಗಗಳು ಅವರಿಗೆ ಅಪಾರ ಕೀರ್ತಿಯನ್ನು ತಂದು ಕೊಟ್ಟಿದೆ.

ಅತ್ಯಂತ ಎಳೆಯ ಪ್ರಾಯದಲ್ಲಿಯೇ ಯಕ್ಷಗಾನ ಕ್ಷೇತ್ರದಲ್ಲಿ ಅಪಾರ ಸಾಧನೆಯನ್ನು ಮಾಡಿ ಪ್ರಸಿದ್ಧಿಯನ್ನು ಪಡೆದ ಮಧುರ ಕಂಠದ ದಿವಂಗತರು ಇತ್ತೀಚೆಗಷ್ಟೇ (೨೭-೫-೧೯೯೦) ಅಪಘಾತಕ್ಕೀಡಾಗಿ ಮರಣ ಹೊಂದಿದರು.

ತಮ್ಮ ಪ್ರತಿಭೆ ಹಾಗೂ ಜನಪ್ರಿಯತೆಗಳಿಂದ ಮತ್ತಷ್ಟು ಸಾಧನೆಯನ್ನು ಮಾಡಬಹುದಾಗಿದ್ದ, ಶ್ರೀಯುತರ ಮರಣದಿಂದಾಗಿ ಯಕ್ಷಗಾನ ರಂಗಕ್ಕೆ ಅಪಾರ ಹಾನಿಯುಂಟಾಗಿದೆ.

ಆದರೆ ಸರ್ಕಾರ ಗೌರವಧನ ಅಥವಾ ಮಾಸಾಶನಗಳನ್ನು ನೀಡುವ ಸಂದರ್ಭದಲ್ಲಿ ವಯೋಮಿತಿ, ಪರಮಾನ ಮುಂತಾದ ನಿಯಮಗಳನ್ನು ಗೊತ್ತುಪಡಿಸಿದೆ. ಅಂದರೆ ಗೌರವಧನ ನೀಡಲು ೫೫ ವರ್ಷ ವಯಸ್ಸಾಗಿರಬೇಕು. ಮಾಸಾಶನ ಪಡೆಯಲು ೫೮ ವರ್ಷವಾಗಿರಬೇಕು. ಹಾಗೂ ವಾರ್ಷಿಕ ಪರಮಾನ ೧೮೦೦ ರೂ. ಗಳ ಒಳಗಿರಬೇಕು. ಈ ನಿಯಮಗಳ ಪ್ರಕಾರ ಗೌರವಧನ ಮಾಸಾಶನ ಪಡೆಯುತ್ತಿದ್ದ ಕಲಾವಿದರು ಸತ್ತರೆ ಅವರ ಪತ್ನಿಯವರಿಗೆ ೧೦೦ ರೂ. ಗಳ ಮಾಸಾಶನ ನೀಡುವ ಅವಕಾಶವಿದೆ. ಆದರೆ ದಿ: ಕಾಳಿಂಗ ನಾವಡರ ಸಂದರ್ಭದಲ್ಲಿ ಅವರ ಕುಟುಂಬ ವರ್ಗದವರಿಗೆ ಮೇಲಿನ ಸೌಲಭ್ಯವು ದೊರಕುವ ಅವಕಾಶವಿಲ್ಲ.

ಆದ್ದರಿಂದ ಇಷ್ಟು ಕಿರಿಯ ಪ್ರಾಯದ ಕಲಾವಿದರ ಕುಟುಂಬದವರಿಗೆ ನೆರವು ನೀಡುವ ವಿಷಯವನ್ನು ಈಗಿರುವ ನಿಯಮಗಳ ಪ್ರಕಾರ ಅವಕಾಶವಿಲ್ಲದಿರುವುದರಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಸಾಧ್ಯವೇ ಎಂಬ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಶ್ರೀ ಬಿ. ಬಸವರಾಜ (ಬ್ರಹ್ಮಾವರ):— ಅಧ್ಯಕ್ಷರೇ ಕಾಳಿಂಗನಾವಡರು ನನ್ನ ಕ್ಷೇತ್ರದವರು. ಅವರ ಕುಟುಂಬದವರು ಮನೆ ಕಟ್ಟುತ್ತಿದ್ದಾರೆ. ಅವರಿಗೆ ಹಣದ ಸಹಾಯ ಕೊಡಬಹುದು ಕಾನೂನು ರೀತ್ಯ ಅವಕಾಶವಿಲ್ಲದಿದ್ದರೂ ವಿಶೇಷ ಪರಿಸ್ಥಿತಿಯಲ್ಲಿ ಅವರ ಕುಟುಂಬಕ್ಕೆ ಆರ್ಥಿಕ ಸೌಲಭ್ಯ ಒದಗಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್:— ಅದನ್ನೇ ಪರಿಶೀಲನೆ ಮಾಡುತ್ತಿದ್ದೇವೆ ಕಾನೂನಿನಲ್ಲಿ ಈಗ ಅವಕಾಶವಿಲ್ಲ. ಹೇಗೆ ಸಹಾಯ ಮಾಡಬೇಕೆಂಬುದನ್ನು ಯೋಚನೆ ಮಾಡುತ್ತಿದ್ದೇವೆ.

ಕರ್ನಾಟಕ ಸೆಂಟ್ರಲ್ ಕೊ. ಆ. ಬ್ಯಾಂಕ್, ಧಾರವಾಡ ಇವರಿಂದ ಸರ್ಕಾರದ ಆದೇಶಗಳ ಉಲ್ಲಂಘನೆ.

ಶ್ರೀ ಕೆ. ಬಿ. ಕೋಳಿವಾಡ್:— ಮಾನ್ಯ ಅಧ್ಯಕ್ಷರೇ, ದಿ ಕರ್ನಾಟಕ ಸೆಂಟ್ರಲ್ ಕೋ. ಆ. ಬ್ಯಾಂಕ್ ಲಿಮಿಟೆಡ್ ಧಾರವಾಡ ಇವರ ಆಡಳಿತ ಮಂಡಳಿಯವರು ಸರಕಾರದ ಅನೇಕ ಆದೇಶಗಳನ್ನು ಉಲ್ಲಂಘನೆ ಮಾಡಿದ್ದರ ಬಗ್ಗೆ ಯೋಗ್ಯ ಕ್ರಮ ಜರುಗಿಸಲು ಮಾನ್ಯ ಸಹಕಾರ ಮಂತ್ರಿಗಳಿಗೂ ಹಾಗೂ ಸಹಕಾರ ಕಾರ್ಯದರ್ಶಿಗಳಿಗೂ ೧೯೯೦ನೇ ಏಪ್ರಿಲ್ ಎರಡನೇ ವಾರದಲ್ಲಿ ಮನವಿ ಸಲ್ಲಿಸಲಾಗಿತ್ತು. ಆದರೆ ಇಲ್ಲಿಯವರೆಗೂ ಈ ಬಗ್ಗೆ ಯಾವುದೇ ಕ್ರಮ ಜರುಗಿಸಿರುವುದಿಲ್ಲ. ಆಪಾದನೆಗಳು ಬಹಳ ಗುರುತರವಾಗಿವೆ. ಮುಖ್ಯವಾಗಿ ಇವುಗಳಲ್ಲಿ ಹೊಸದಾಗಿ ನೌಕರರನ್ನು ನೇಮಕಾತಿ ಮಾಡಬಾರದು ಅಂತಾ ಸರಕಾರದ ಆದೇಶವಿದ್ದರೂ ಜನವರಿ ೧೯೯೧ರಲ್ಲಿ ೧೩ ಜನರನ್ನು ನೌಕರಿಗೆ ತೆಗೆದುಕೊಂಡಿರುತ್ತಾರೆ. ೧೯ ಜನ ದಿನಗೂಲಿ ನೌಕರರನ್ನು ಕಾಯಂ ನೌಕರರನ್ನಾಗಿ ಪರಿವರ್ತನೆ ಮಾಡಿಕೊಂಡಿರುತ್ತಾರೆ. ಪೇಸ್ಕೇಲನ್ನು ರಿವಾಯಿಸ್ ಮಾಡಿರುತ್ತಾರೆ. ೩೫೦೦೦ ರೂಪಾಯಿ ಬೆಲೆಬಾಳುವ ಬ್ಯಾಂಕಿನ ಹಳೇ ಕಬ್ಬಿಣದ ಗರ್ಡರುಗಳನ್ನು ಕೇವಲ ೬೦೦೦ ರೂಪಾಯಿಗಳಿಗೆ ಮಾರಾಟ ಮಾಡಿರುತ್ತಾರೆ. ನಿವೃತ್ತಿ ಹೊಂದಿದ ನೌಕರರಿಗೆ ಅಕ್ರಮವಾಗಿ ಹೆಚ್ಚುವರಿ ಮೂರು ತಿಂಗಳ ಸಂಬಳ ಬಟವಾಡೆ ಮಾಡಿರುತ್ತಾರೆ. ಇದೂ ಅಲ್ಲದೇ ತಾ: ೩೧-೩-೧೯೯೦ ರಂದು ಸರಕಾರವು ಒಂದು ಆದೇಶ ಹೊರಡಿಸಿ ಆಗಿನ ಕಾರ್ಯ

ನಿರ್ವಾಹಕ ಹುದ್ದೆಯ ಅವಧಿಯನ್ನು ಮುಂದುವರೆಯಿಸಿದ್ದು ಇರುತ್ತದೆ. ಇದನ್ನು ಜಾರಿ ಮಾಡ ಬೇಕು ಅಂತಾ ಮಾನ್ಯ ಉಪ ಕಾರ್ಯದರ್ಶಿಯವರು ಸಹಕಾರಿ ಇಲಾಖೆ ಇವರು ದೂರವಾಣಿ ಮೂಲಕ ತಿಳಿಸಿದ್ದರೂ ಸಹ ಇದನ್ನು ಉಲ್ಲಂಘಿಸಿ ಇಂಥ ಮಹತ್ವದ ಹುದ್ದೆಯ ದೊಡ್ಡ ಸರಕಾರಿ ಅಧಿಕಾರಿ ಗಳನ್ನು ಅವಹೇಳನಕರವಾದ ರೀತಿಯಲ್ಲಿ ಕಚೇರಿಯಿಂದಾ ಹೊರಹಾಕಿ, ಕೀಲಿಹಾಕಿರುತ್ತಾರೆ. ಇಂಥ ದೌರ್ಜನ್ಯ ತೋರಿಸಿದ ಈ ಬ್ಯಾಂಕಿನ ಆಡಳಿತ ಮಂಡಳಿಯನ್ನು ಕೂಡಲೇ ಕಿತ್ತುಹಾಕಿ, ಸರಕಾರದ ಪಶಕ್ಕೆ ತೆಗೆದುಕೊಳ್ಳುವ ಈ ವಿಷಯವನ್ನು ಮಾನ್ಯ ಸಹಕಾರದ ಸಚಿವರ ಗಮನಕ್ಕೆ ತರ ಬಯಸುತ್ತೇನೆ.

ಶ್ರೀ ಕೆ. ಜೆ. ಜಾರ್ಜ್ (ಸಾರಿಗೆ ಮಂತ್ರಿಗಳು):—ಮಾನ್ಯ ಅಧ್ಯಕ್ಷರೇ, ಇದನ್ನು ಸಹಕಾರಿ ಸಚಿವರ ಗಮನಕ್ಕೆ ತಂದು ಮಾನ್ಯ ಸದಸ್ಯರಿಗೆ ಉತ್ತರವನ್ನು ಕಳುಹಿಸಿ ಕೊಡುತ್ತೇವೆ.

ಅಧ್ಯಕ್ಷರು:— ನಿಮಗೆ ಉತ್ತರ ಕಳಿಸಿಕೊಡುತ್ತಾರೆ.

ಶಾಮನೂರು ಗ್ರಾಮದ ಬಳಿ ಸಿಖ್ ವ್ಯಕ್ತಿಯೊಬ್ಬರ ಶವದ ಪತ್ತೆ ಕುರಿತು

ಶ್ರೀ ಕೆ. ಶಿವಮೂರ್ತಿ:— ಮಾನ್ಯ ಅಧ್ಯಕ್ಷರೇ, ಸಿಖ್ ವ್ಯಕ್ತಿಯೊಬ್ಬರ ಶವ ದಾವಣಗೆರೆ ತಾಲ್ಲೂಕಿನ ಶಾಮನೂರು ಗ್ರಾಮದ ಬಳಿ ರಾಷ್ಟ್ರೀಯ ಹೆದ್ದಾರಿ ಪಕ್ಕದ ಹಳ್ಳವೊಂದರಲ್ಲಿ ತೇಲುತ್ತಿದ್ದುದು ಪತ್ತೆ ಆಗಿದೆ. ಈ ಶವ ಪಂಜಾಬ್ ರಾಜ್ಯದ ವೈದ್ಯಕೀಯ ಹೆಣವೆಂದು ಪತ್ರಿಕೆಯಲ್ಲಿ ತಿಳಿಸಲಾಗಿದೆ. ಈ ಹೆಣವನ್ನು ತಂದು ಹಾಕುವಾಗ ಹಸಿರು ಕಾರಿನವರು ಚೀಲದ ಮೂಟೆಯೆನ್ನು ಹಳ್ಳಕ್ಕೆ ದೂಡುವಾಗ ಜನರು ನೋಡಿದಾಗ ಕಲ್ಲು ತೂರಿದರೆಂದು ತಿಳಿದುಬಂದಿದೆ. ಪ್ರಯುಕ್ತ ಈ ವಿಚಾರದ ಬಗ್ಗೆ ಯಾರು ಕೊಲೆಗಾರರು? ಈ ಹೆಣ ತರಲು ಯಾರು ಕಾರಣರು ಎಂಬುದನ್ನು ತಿಳಿಯಲು ಸದನದಲ್ಲಿ ಪ್ರಸ್ತಾಪಿಸುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು):—ಮಾನ್ಯ ಅಧ್ಯಕ್ಷರೇ.

ದಿನಾಂಕ ೧೫-೬-೧೯೯೦ ರಂದು ಶಾಮನೂರು ಗ್ರಾಮದ ಪಂಚದೇವಯ್ಯ ಮತ್ತು ಇತರ ಮೂವ್ವರು ರಾಷ್ಟ್ರೀಯ ಹೆದ್ದಾರಿ ಸಂಖ್ಯೆ ೪ ರ ರಸ್ತೆಯ ಪಕ್ಕದಲ್ಲಿ, ಮಾರಂತಿ ಕಾರಿನಿಂದ ಶವ ವೊಂದನ್ನು ರಸ್ತೆಯ ಪಕ್ಕದ ಹಳ್ಳಕ್ಕೆ ಬಿಸಾಡಿದ್ದನ್ನು ಕಂಡ ಮೇರೆಗೆ, ಅವರು ಕೂಡಲೆ ದಾವಣಗೆರೆಯ ರೂರಲ್ ಸರ್ಕಲ್ ಇನ್ಸ್‌ಪೆಕ್ಟರ್ ಅವರಿಗೆ ತಿಳಿಸಿದ್ದು, ಮೊಕದ್ದಮೆ ಸಂಖ್ಯೆ ೨೨೦.೯೦ ಕಲಂ ೩೦೨, ೨೧೧ ಐಪಿಸಿ ಮೇರೆಗೆ ಮೊಕದ್ದಮೆಯನ್ನು ನೋಂದಾಯಿಸಿಕೊಳ್ಳಲಾಗಿದೆ. ಈ ಬಗ್ಗೆ ಹರಿಹರದ ಸಿ.ಪಿ.ಐ ಅವರು ಮುಂದಿನ ತನಿಖೆಯನ್ನು ಕೈಗೊಂಡಿದ್ದಾರೆ. ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ದಿನಾಂಕ ೨೩.೬.೯೦ ರಂದು ಉಪ್ಪಾರಪೇಟೆ ಪೋಲೀಸ್ ಠಾಣೆಗೆ ೪೮ ವರ್ಷ ವಯಸ್ಸಿನ ಡಾ. ಪೈಯಾರ್ ಸಿಂಗ್ ಎಂಬುವರು ಕಾಣೆಯಾದ ಬಗ್ಗೆ ನೀಡಿದ ದೂರಿನ ಮೇರೆಗೆ ಮನುಷ್ಯ ಕಾಣೆಯಾದ ಬಗ್ಗೆ ಮೊಕದ್ದಮೆ ದಾಖಲು ಮಾಡಿಕೊಂಡು ತನಿಖೆ ನಡೆಸಲಾಗಿ, ಡಾ. ಪೈಯಾರ್‌ಸಿಂಗ್‌ರವರು ದಿನಾಂಕ ೧೪.೬.೯೦ರಂದು ಬೆಂಗಳೂರಿಗೆ ರೂ. ೨,೩೦,೦೦೦-೦೦ ಹಣದೊಂದಿಗೆ, ಅವರ ಮಗನನ್ನು ಖಾಸಗಿ ವೈದ್ಯಕೀಯ ಕಾಲೇಜಿಗೊಂದಕ್ಕೆ ದಾಖಲು ಮಾಡಲು ಬಂದಿದ್ದು ಕಂಡುಬರುತ್ತದೆ. ದಾವಣಗೆರೆ ಹತ್ತಿರ ಕೆಂಡು ಬಂದಿರುವ ಶವವು ಡಾ. ಪೈಯಾರ್‌ಸಿಂಗ್ ಅವರದ್ದೆಂದು ಗುರುತಿಸಲಾಗಿದೆ.

ಈಗಾಗಲೆ, ಈ ಅಪರಾಧಕ್ಕೆ ಒಳಗಾಗಿರುವ ನಾಪತ್ತೆಯಾದ ಹಾಗೂ ಈ ಕೊಲೆ ಮೊಕದ್ದಮೆಗೆ ಉಪಯೋಗಿಸಿರುವ ಕಾರನ್ನು ಪತ್ತೆ ಹಚ್ಚಲಾಗಿದೆ, ಚಂದನ್ ಸಿಂಗ್, ಅಮೃತ್‌ಸರ್ ಮತ್ತು ಬರಬಿ ಆಲಿ ಹುಸೈನ್ ಬಕ್ರಿ ಎಂಬುವ ಬೆಂಗಳೂರಿನ ವೈದ್ಯಕೀಯ ಕಾಲೇಜಿನ ಇಬ್ಬರು ವಿದ್ಯಾರ್ಥಿಗಳನ್ನು ಬಂಧಿಸಲಾಗಿದೆ. ಹಾಗೆಯೇ ಸದರಿ ಡಾ ಪೈಯಾರ್ ಸಿಂಗ್‌ರವರು ಇಳಿದುಕೊಂಡಿದ್ದ ರೂಂ ನಿಂದ ರೂ. ೫೦.೦೦೦-೦೦ ವನ್ನು ಹಾಗೂ ಈ ಅಪರಾಧಕ್ಕೆ ಒಳಗಾದ ಇಬ್ಬರು ವಿದ್ಯಾರ್ಥಿಗಳಿಂದ ೧,೪೦,೦೦೦ ರೂ. ಗಳನ್ನು ವಶಪಡಿಸಿಕೊಳ್ಳಲಾಗಿದೆ. ಹಾಗೂ ತನಿಖೆಯೂ ಮುಂದುವರೆದಿದೆ.